OCTOBER 16, 2025

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಕೇಂದ್ರ ಹಣಕಾಸು ಖಾತೆ ಸಚಿವರಾದ ನಿರ್ಮಲಾ ಸೀತಾರಾಮನ್, ರಾಜ್ಯಕ್ಕೆ ಭೇಟಿ ನೀಡಿದ್ದು, ಇಂದು ಮತ್ತು ನಾಳೆ ಹಲವು ವಿಶೇಷ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ಅವರು, ಇನ್ನು ಕೆಲವೇ ಕ್ಷಣಗಳಲ್ಲಿ, ರಾಯಚೂರು ಜಿಲ್ಲೆ, ಸಿಂಧನೂರು ತಾಲೂಕು, ಜವಳಗೇರಾ ಗ್ರಾಮದಲ್ಲಿ, ರೈತರ ತರಬೇತಿ ಕೇಂದ್ರ ಹಾಗೂ ಸಂಸದರ ಪ್ರಾದೇಶಿಕ ನಿಧಿ ಯೋಜನೆ ಅಡಿ, ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ಮೌಲ್ಯವರ್ಧನಾ ಘಟಕಕ್ಕೆ ಚಾಲನೆ ನೀಡಲಿದ್ದಾರೆ.

<><><>

ಮಧ್ಯಾಹ್ನ 1 ಗಂಟೆ 45 ನಿಮಿಷಕ್ಕೆ, ಬಳ್ಳಾರಿ ಜಿಲ್ಲೆ, ಸಿರಗುಪ್ಪ ತಾಲೂಕು, ಬಾಗೇವಾಡಿ ಗ್ರಾಮದ, ಮೇಲ್ದರ್ಜೆಗೇರಿಸಿದ ಗ್ರಂಥಾಲಯ, ಅರಿವು ಕೇಂದ್ರಕ್ಕೆ ಭೇಟಿ ನೀಡಲಿದ್ದಾರೆ. ಈ ಗ್ರಂಥಾಲಯ ವಿಶಿಷ್ಟವಾಗಿದ್ದು, ಪ್ರತಿ ಶನಿವಾರ ಶಾಲಾ ಮಕ್ಕಳಿಗಾಗಿ, ಯು ಟ್ಯೂಬ್ ಕಾರ್ಯಕ್ರಮ ಪ್ರಸಾರ, ಆನ್‌ಲೈನ್ ತರಗತಿಗಳು, ಓದು ಬೆಳಕು ಕಾರ್ಯಕ್ರಮ ಆಯೋಜನೆ, ಗ್ರಂಥಾಲಯದಲ್ಲಿ ಮಕ್ಕಳಿಗೆ, ಒಳಾಂಗಣ ಕ್ರೀಡೆಗಳ ಆಯೋಜನೆ, ಕೌಶಲ ಆಧಾರಿತ ಕಾಗದ ಕಲಾಕೃತಿಗಳ ತಯಾರಿಕೆಗೆ ಸಹ, ತರಬೇತಿ ನೀಡಲಾಗುತ್ತಿದೆ.

<><><>

ಮಧ್ಯಾಹ್ನ 3 ಗಂಟೆಗೆ, ಬಳ್ಳಾರಿ ಜಿಲ್ಲೆ, ಸಿರಗುಪ್ಪ ತಾಲೂಕು, ಕೊಂಚಿಗೇರಿ ಗ್ರಾಮದಲ್ಲಿ, ರೈತರ ತರಬೇತಿ ಕೇಂದ್ರ ಹಾಗೂ ಸಂಸದರ ಪ್ರಾದೇಶಿಕ ನಿಧಿ ಯೋಜನೆ ಅಡಿ, ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ಮೌಲ್ಯವರ್ಧನಾ ಘಟಕವನ್ನು, ನಿರ್ಮಲಾ ಸೀತಾರಾಮನ್ ಉದ್ಘಾಟಿಸಲಿದ್ದಾರೆ.

<><><>

ಮಧ್ಯಾಹ್ನ 4 ಗಂಟೆಗೆ, ಕರ್ನಾಟಕ ಗ್ರಾಮೀಣ ಬ್ಯಾಂಕ್ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಪಾಲ್ಗೊಳ್ಳಲಿದ್ದಾರೆ.

<><><>

'ಉತ್ತಮ ಆಹಾರ ಹಾಗೂ ಭವಿ ್ಯಕ್ಕಾಗಿ ಕೈಜೋಡಿಸಿ' ಎಂಬ ಧ್ಯೇಯದೊಂದಿಗೆ, ಇಂದು ವಿಶ್ವ ಆಹಾರ ದಿನಾಚರಣೆ. ವಿಶ್ವ ಆಹಾರ ದಿನ, ಸುಸ್ಥಿರ, ಸಮೃದ್ಧ ಮತ್ತು ಆಹಾರ–ಸುರಕ್ಷಿತ ಭವಿ ್ಯ ರೂಪಿಸುವಲ್ಲಿ, ಜಾಗತಿಕ ಸಹಯೋಗ ಸಾಧಿಸುವ ಗುರಿಯೊಂದಿಗೆ, ಆಚರಿಸಲಾಗುತ್ತಿದೆ.

<><><>

ಆಹಾರವನ್ನು ವ್ಯರ್ಥ ಮಾಡುವ ಬದಲು, ಹಸಿದವರಿಗೆ ನೀಡೋಣ. ಆಹಾರದ ಮಹತ್ವವನ್ನು ಅರಿತು, ಹಸಿವು ಮುಕ್ತ ಭಾರತವನ್ನು ನಿರ್ಮಿಸೋಣ ಎಂದು, ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಖಾತೆ ಸಚಿವ, ಪ್ರಲ್ಹಾದ ಜೋಶಿ ಎಕ್ಸ್ ಮಾಧ್ಯಮದಲ್ಲಿ ಮನವಿ ಮಾಡಿದ್ದಾರೆ.

<><><>

ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಅಖಿಲ ಕರ್ನಾಟಕ ಜನ ಜಾಗೃತಿ ವೇದಿಕೆಯ ಸಹಯೋಗದಲ್ಲಿ, ಮದ್ಯ ವರ್ಜನ ಶಿಬಿರ ಆಯೋಜಿಸಿ, ರಾಜ್ಯದ 1 ಲಕ್ಷ 40 ಸಾವಿರ ಜನರನ್ನು, ಮದ್ಯ ವ್ಯಸನದಿಂದ ಮುಕ್ತಗೊಳಿಸಿದೆ ಎಂದು, ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಶರಣಪ್ಪ ಸಲದಾಪುರ ತಿಳಿಸಿದ್ದಾರೆ. ಕಲಬುರಗಿಯ ರಾಮತೀರ್ಥದಲ್ಲಿ, ಗಾಂಧಿ ಸ್ಮೃತಿ ಮತ್ತು ಜನ ಜಾಗೃತಿ ಸಮಾವೇಶದಲ್ಲಿ ಮಾತನಾಡಿದರು. 6 ಲಕ್ಷ 50 ಸಾವಿರ ಸ್ವ ಸಹಾಯ ಸಂಘಗಳ ಮೂಲಕ, ಸುಮಾರು 55 ಲಕ್ಷ ಸದಸ್ಯರು, ಸಮಾಜ ಪರಿವರ್ತನೆಯ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ ಎಂದರು.

<><><>

ರಾಯಚೂರು ಜಿಲ್ಲೆ, ಸುಲ್ತಾನಪುರ ಗ್ರಾಮದ, ಗೂಡಂಗಡಿಯ ಮಾಲೀಕರಾದ, ವಿಜಯಲಕ್ಷ್ಮೀ ಅವರನ್ನು, ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ, ಶರಣಪ್ಪ ಸಲಾದಪುರ ಸನ್ಮಾನಿಸಿದರು. ಕಳೆದ 20 ವ ´ಗಳಿಂದ, ಅವರು ತಮ್ಮ ಪಾನ್ ಬೀಡಾ ಅಂಗಡಿಯಲ್ಲಿ, ತಂಬಾಕು ಉತ್ಪನ್ನ ಮಾರದೇ, ಯುವಜನತೆಯ ಆರೋಗ್ಯ ಕಾಪಾಡುವಲ್ಲಿ, ಮಾದರಿ ಹೆಜ್ಜೆ ಇರಿಸಿದ್ದಾರೆ.

<><><>

ಪೊಲೀಸ್ ಮತ್ತು ಸೇನಾ ಕ್ಯಾಂಟೀನ್ ಮಾದರಿಯಲ್ಲಿ, ರಾಜ್ಯ ಸರಕಾರಿ ನೌಕರರಿಗೆ, ನಿತ್ಯದ ಬದುಕಿಗೆ ಅಗತ್ಯವಿರುವ, ಪ್ರತಿಯೊಂದು ವಸ್ತುವನ್ನು, ರಿಯಾಯಿತಿ ದರದಲ್ಲಿ ಒದಗಿಸಲು, ಎಂ.ಎಸ್.ಐ.ಎಲ್. ವತಿಯಿಂದ ಸೂಪರ್ ಮಾರ್ಕೆಟ್ ಆರಂಭಿಸುವ ಚಿಂತನೆ ನಡೆದಿದೆ ಎಂದು, ಕೈಗಾರಿಕೆ ಖಾತೆ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ. ಈ ಸೂಪರ್ ಮಾರ್ಕೆಟ್ ಮಳಿಗೆ ಆರಂಭಿಸುವ ಕುರಿತು, ಒಂದು ತಿಂಗಳಲ್ಲಿ ವಿಸ್ತೃತ ವರದಿ ಸಲ್ಲಿಸುವಂತೆ, ಅಧಿಕಾರಿಗಳಿಗೆ ಸೂಚಿಸಲಾಗಿದೆ. ಅಧ್ಯಯನದ ಆಧರಿಸಿ, ಮೊದಲ ಹಂತದಲ್ಲಿ, ಬೆಂಗಳೂರಿನಲ್ಲಿ ಮಳಿಗೆಗಳನ್ನು ತೆರೆಯುವ ಆಲೋಚನೆ ಇದೆ. ನಂತರದ ದಿನಗಳಲ್ಲಿ, ಎಲ್ಲ ಜಿಲ್ಲಾ ಕೇಂದ್ರಗಳಲ್ಲೂ ವಿಸ್ತರಿಸಬಹುದು ಎಂದರು.

<><><>

ಉಡುಪಿ ಜಿಲ್ಲಾ ಪಂಚಾಯಿತಿ ಹಾಗೂ ಕಾಪು ತಾಲೂಕು ಪಂಚಾಯಿತಿ ವತಿಯಿಂದ, ಸಂಜೀವಿನಿ ಮಹಿಳಾ ಒಕ್ಕೂಟದ ಸದಸ್ಯೆಯರು ತಯಾರಿಸಿದ, ದೀಪಾವಳಿ ಉಡುಗೊರೆಗಳನ್ನು, ಅಕ್ಕ ಅಂಗಡಿ ಮೂಲಕ, ಮಾರಾಟ ಮಾಡಲು, ಉಡುಪಿ ಚಿಕ್ಕಮಗಳೂರು ಸಂಸದ, ಕೋಟ ಶ್ರೀನಿವಾಸ ಪೂಜಾರಿ, ಬಿಡುಗಡೆಗೊಳಿಸಿದರು. ಕಟಪಾಡಿ ಅಕ್ಕ ಸಂಜೀವಿನಿ ಬಳಗ, ಡ್ರೈ ಫ್ರುಟ್ಸ್ ಗಿಫ್ಟ್ ಬಾಕ್ಸ್, ಪಡುಬಿದ್ರೆ ಹಾಗೂ ಶಿರ್ವ ಅಕ್ಕ ಅಂಗಡಿ, ಮನೆಯಲ್ಲಿ ತಯಾರಿಸಿದ, ವಿವಿಧ ಬಗೆಯ ಲಡ್ಡು, ಸಿಹಿ ತಿನಿಸುಗಳು ಹಾಗೂ ಬೆಳಪು ಅಕ್ಕ ಅಂಗಡಿಯ, ಗೋ ಉತ್ಪನ್ನಗಳಿಂದ ತಯಾರಿಸಿದ, ಪೂಜಾ ಸಾಮಗ್ರಿಗಳ ಬಾಕ್ಸ್, ದೀಪಾವಳಿ ಉಡುಗೊರೆಯಾಗಿ ವಿನ್ಯಾಸಗೊಳಿಸಲಾಗಿದೆ.

<><><>

ಗದಗ ಜಿಲ್ಲೆ, ನಾಗಾವಿ ಗ್ರಾಮದ, ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ, "ಶಾಶ್ವತ ಭೂ ಗರ್ಭ ಜಲ ಅಭಿವೃದ್ಧಿ ಮತ್ತು ಭೂ ಗರ್ಭ ಜಲ ಸಂಪನ್ಮೂಲಗಳ ನಿರ್ವಹಣೆ" ಕುರಿತ, ಮೂರು ದಿನಗಳ ರಾಷ್ಟ್ರೀಯ ತರಬೇತಿ ಕಾರ್ಯಾಗಾರ ಆರಂಭವಾಗಿದೆ. ಕೇಂದ್ರೀಯ ಭೂ ಗರ್ಭ ಜಲ ಮಂಡಳಿ, ಬೆಂಗಳೂರು ಘಟಕದ ಸಹಯೋಗದಲ್ಲಿ ಆಯೋಜಿತ ಕಾರ್ಯಾಗಾರಕ್ಕೆ, ಕುಲಸಚಿವ ಸುರೇಶ ನಾಡಗೌಡರ ಚಾಲನೆ ನೀಡಿದರು.

<><><>

ಬೆಂಗಳೂರು – ಮುಂಬಯಿ ಮಧ್ಯೆ, ಶೀಘ್ರ ನೂತನ ಸೂಪರ್ ಫಾಸ್ಟ್ ರೈಲು, ತನ್ನ ಸಂಚಾರ ಪ್ರಾರಂಭಿಸಲಿರುವ ಹಿನ್ನೆಲೆ, ಬೆಳಗಾವಿ ಮಾರ್ಗವಾಗಿ ಸಂಚರಿಸುವಂತೆ, ಕೇಂದ್ರ ರೇಲ್ವೆ ಖಾತೆ ಸಚಿವ ಅಶ್ವಿನಿ ವೈಷ್ಣವ್ ಹಾಗೂ ಕೇಂದ್ರ ರೇಲ್ವೆ ಖಾತೆ, ರಾಜ್ಯ ಸಚಿವ ವಿ.ಸೋಮಣ್ಣ ಅವರಿಗೆ, ವಿನಂತಿಸಿದ್ದಾಗಿ, ಬೆಳಗಾವಿ ಸಂಸದ ಜಗದೀಶ ಶೆಟ್ಟರ್ ತಿಳಿಸಿದ್ದಾರೆ.

<><><>

ಬಳ್ಳಾರಿ ಸೂಪರ್ ಸ್ಪೆ ಾಲಿಟಿ ಆಸ್ಪತ್ರೆ, ಮುಂಬರುವ ಡಿಸೆಂಬರ್ ತಿಂಗಳಿನಲ್ಲಿ, ಉದ್ಘಾಟನೆಯಾಗಲಿದೆ ಎಂದು, ವೈದ್ಯಕೀಯ ಶಿಕ್ಷಣ ಖಾತೆ ಸಚಿವ, ಶರಣ ಪ್ರಕಾಶ ಪಾಟೀಲ ತಿಳಿಸಿದ್ದಾರೆ. ಬಳ್ಳಾರಿ ಸೂಪರ್ ಸ್ಪೆ ಾಲಿಟಿ ಆಸ್ಪತ್ರೆಗೆ ಭೇಟಿ ನೀಡಿ,

ವೈದ್ಯಾಧಿಕಾರಿಗಳೊಂದಿಗೆ ಸಚಿವರು ಸಭೆ ನಡೆಸಿದರು. 450 ಹಾಸಿಗೆಗಳ, ಮೇಲ್ದರ್ಜೆಗೇರಿಸಿದ ಅಸ್ಪತ್ರೆಯಲ್ಲಿ, ಅತ್ಯಾಧುನಿಕ ಚಿಕಿತ್ಸೆ ಹಾಗೂ ಆರೈಕೆ ವ್ಯವಸ್ಥೆ ಕಲ್ಪಿಸಲಾಗುತ್ತಿದೆ ಎಂದರು.

<><><>

ರಾಷ್ಟ್ರೀಯ ಭದ್ರತಾ ಪಡೆ, ಎನ್.ಎಸ್.ಜಿ. 41ನೇ ಸಂಸ್ಥಾಪನಾ ದಿನಾಚರಣೆ ಇಂದು. ಉನ್ನತ ತರಬೇತಿ ಪಡೆದ, ಬ್ಲ್ಯಾಕ್ ಕ್ಯಾಟ್ ಕಮಾಂಡೋ ಪಡೆ, ತುರ್ತು ಪರಿಸ್ಥಿತಿ ಸಂದರ್ಭದಲ್ಲಿ, ದೇಶ ರಕ್ಷಣೆಯ ಹೊಣೆ ಹೊತ್ತ ತಂಡಕ್ಕೆ, ಗಣ್ಯರು ಶುಭಾಶಯ ಕೋರಿದ್ದಾರೆ.

<><><>

ಬರುವ ನವೆಂಬರ್ 1 ರಿಂದ, 30ರ ವರೆಗೆ, ಕೇಂದ್ರ ಪಿಂಚಣಿ ಮತ್ತು ಪಿಂಚಣಿದಾರರ ಯೋಗಕ್ಷೇಮ ಸಚಿವಾಲಯ, ಜೀವಿತ ಪ್ರಮಾಣ ಪತ್ರ, ಡಿಜಿಟಲ್ ಲೈಫ್ ಸರ್ಟಿಫಿಕೇಟ್, ಸಲ್ಲಿಕೆ ಆಂದೋಲನ ದೇಶಾದ್ಯಂತ ಆಯೋಜಿಸಲಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.